ಸಾಕ್ಷಿಯನ್ನು ದಿಃ 22-03-2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಎಮ್ ಹೆಚ್ ವಕೀಲರಿಂದ**

ನಾನು ಪ್ರತಿವಾದಿಯ ಮನೆಗೆ ದಿಃ19-04-2021 ಮಧ್ಯಾಹ್ನ 01.30 ರಿಂದ 02.00 ರ ಸಮಯದಲ್ಲಿ ಹೋಗಿದ್ದಾಗ ಪ್ರತಿವಾದಿ ಚಾಪಾ ಕಾಗದ ತರಿಸಿ ಇಟ್ಟಿದ್ದರು. ಬರೆಯುವ ಮೊದಲು ನಾನು ಚಾಪಾ ಕಾಗದ ನೋಡಿಲ್ಲ. ಬರೆದ ನಂತರ ನೋಡಿದ್ದೇನೆ. ನಿಪಿಃ1 ಕರಾರು ಪತ್ರ ಬರೆದಾಗ ಮಧ್ಯಾಹ್ನ ಸುಮಾರು 03.00 ಗಂಟೆಯಾಗಿರಬಹುದು. ನಿಪಿಃ1 ನ್ನು ಬರೆದಾಗ ನಾನು, ಪ್ರಕಾಶ ಅರಹುಣಸಿ, ಸುರೇಶ ಕವಲೂರು, ಚಂದ್ರಶೇಖರ ಚಬ್ಬರಬಾವಿ ಇದ್ದೇವು. ಪ್ರಕಾಶ ಅರಹುಣಸಿ ನನ್ನ ಸ್ವಂತ ಅಣ್ಣ ಎಂದರೆ ಸರಿ. ಸುರೇಶ ಕವಲೂರು ಮತ್ತು ಚಂದ್ರಶೇಖರ ಚಬ್ಬರಬಾವಿ ನನ್ನ ಸಹಪಾಟಿಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ನನ್ನ ಪರಿಚಯದವರು ಎಂದು ಹೇಳುತ್ತಾರೆ. ಸದರಿ ಚಾಪಾ ಕಾಗದ ರೂ.100/- ಮುಖಬೆಲೆಯದಾಗಿತ್ತು.

ಈಗ ಸಾಕ್ಷಿಗೆ ನಿಪಿಃ1 ನ್ನು ತೋರಿಸಿದ್ದು ಅದರಲ್ಲಿ Description ಮುಂದೆ Saledeed ಎಂದು ಬರೆಯಲಾಗಿದೆ ಎಂದು ಒಪ್ಪಿಕೊಂಡಿರುತ್ತಾರೆ. ನಿಪಿಃ1 ಖರೀದಿ ವಚನಪತ್ರದಲ್ಲಿ ಆಸ್ತಿ ಮಣ್ಣಿನ ಮನೆಯೋ, RCC ಮನೆಯೋ ಎಂಬ ವಿವರಣೆ ಬರೆದಿಲ್ಲ ಎಂದರೆ ಸರಿ. ಮನೆಯ ವರ್ಣನೆಯನ್ನು ಸರಿಯಾಗಿ ಬರೆಸುವಂತೆ ನಾನು ಪ್ರತಿವಾದಿಯನ್ನು ಕೇಳಿಲ್ಲ. ಖರೀದಿ ವಚನಪತ್ರದಲ್ಲಿ ಪ್ರತಿವಾದಿಗೆ ಪ್ರಾಂಪಚಿಕ ಅಡಚಣೆ ಇತ್ತು ಎಂದು ಬರೆದಿಲ್ಲ ಎಂದರೆ ಸರಿ. ಖರೀದಿ ರಖಂ ಆಸ್ತಿಗೆ ಹೆಚ್ಚಿನ ಬೆಲೆಯಾಗಿತ್ತು ಎಂದು ನಿಪಿಃ1 ರಲ್ಲಿ ಬರೆದಿಲ್ಲ ಎಂದರೆ ಸರಿ. ನಿಪಿಃ1 ರಲ್ಲಿ ಸಂಪೂರ್ಣಕ್ಷೇತ್ರದ ಮನೆಯನ್ನು ಖಂಡಮುಕ್ತ ರೂ.7 ಲಕ್ಷ 35 ಸಾವಿರಗಳಿಗೆ ಖರೀದಿಕೊಟ್ಟಿರುತ್ತೇನೆ ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಿಪಿಃ1 ಖರೀದಿ ಪತ್ರ ಅಲ್ಲ, ಅದು ಕೇವಲ ಖರೀದಿ ವಚನಪತ್ರವಾಗಿರುತ್ತದೆ. ನಿಪಿಃ1 ರಲ್ಲಿ ಖರೀದಿ ವಚನಪತ್ರಕ್ಕೆ ಮುಂಗಡವಾಗಿ ರೂ.2 ಲಕ್ಷ ಕೊಟ್ಟಿರುತ್ತಾರೆ ಎಂದು ಬರೆದಿದೆ ಎಂದರೆ ಸರಿ. ಆದರೆ ಯಾರು ಯಾರಿಗೆ ಹಣ ಕೊಟ್ಟರು ಎಂದು ಬರೆದಿಲ್ಲ ಎಂದರೆ ಸರಿ. ನಿಪಿಃ1 ರಲ್ಲಿ ಖರೀದಿಕೊಡುವವರ ಸಹಿ ಹಾಗೂ ಖರೀದಿ ಮಾಡಿಕೊಳ್ಳುವವರ ಸಹಿ ಎಂದು

ಬರೆಯಲಾಗಿದೆ ಎಂದರೆ ಸರಿ. ಆ ದಿನ ದಾವಾ ಆಸ್ತಿ ಖರೀದಿ ಆಗಿಲ್ಲ. ಖರೀದಿ ವಚನ ಪತ್ರ ಬರೆದುಕೊಡುವವರ ಸಹಿ ಮತ್ತು ವಚನ ಪತ್ರ ಬರೆಸಿಕೊಳ್ಳುವವರ ಸಹಿ ಎಂದು ಬರೆದಿಲ್ಲ ಎಂದರೆ ಸರಿ.

ನಿಪಿಃ1 ನ್ನು ಬರೆದ ದಿನವೇ ಪ್ರತಿವಾದಿ ಅದನ್ನು ನೋಟರಿ ಮಾಡಿಸಿ ನನಗೆ ನೀಡಿದ್ದಾರೆ. ನಿಪಿಃ1 ನ್ನು ನೋಟರಿ ಮಾಡಿಸಲಾಗಿದೆ ಎಂದು ವಾದ ಪತ್ರ, ನೋಟೀಸು ಹಾಗೂ ಮುಖ್ಯ ವಿಚಾರಣೆಯಲ್ಲಿ ಬರೆದಿಲ್ಲ ಎಂದರೆ ಸರಿ. ನಿಪಿಃ1 ನ್ನು ನೋಟರಿ ಮಾಡಿಸುವಾಗ ನಾನು ಸಂಬಂಧಪಟ್ಟ ನೋಟರಿಯವರ ಮುಂದೆ ಹೋಗಿಲ್ಲ. ನಿಪಿಃ1 ರಲ್ಲಿ ನೋಟರಿಯವರಿಂದ ಸಿರಿಯಲ್ ನಂಬರ ಹಾಕಿಲ್ಲ ಎಂದರೆ ಸರಿ.

ನಾನು ದಿನಾಂಕ 21.04.2022 ರಂದು ರೂ.4 ಲಕ್ಷಗಳನ್ನು ನನ್ನ ಖಾತೆಯಿಂದ ಪ್ರತಿವಾದಿಯ ಖಾತೆಗೆ ಜಮಾ ಮಾಡಿದ್ದೇನೆ. ನಾನು ಪ್ರತಿವಾದಿಯ ಖಾತೆಗೆ ಸದರಿ ದಿನಾಂಕದಂದು ಯಾವುದೇ ಹಣ ಹಾಕಿಲ್ಲ ಎಂದರೆ ಸರಿಯಲ್ಲ. ನಂತರ ರೂ. 1 ಲಕ್ಷ 50 ಸಾವಿರಗಳನ್ನು ಡಿಸೆಂಬರ್ 2022 ರಲ್ಲಿ ಪ್ರತಿವಾದಿಯ ಖಾತೆಗೆ ಹಾಕಿದ್ದೇನೆ. ರೂ. 4 ಲಕ್ಷ ಮತ್ತು 1 ವರೆ ಲಕ್ಷ ನೀಡಿದ ಬಗ್ಗೆ ಪ್ರತಿವಾದಿಯಿಂದ ಯಾವುದೇ ಪಾವತಿ ಪಡೆದಿಲ್ಲ ಮತ್ತು ನಿಪಿಃ1 ರಲ್ಲಿ ಬರೆಯಿಸಿಲ್ಲ. ಸಾಕ್ಷಿ ಮುಂದುವರೆದು ಸದರಿ ಹಣದ ಬಗ್ಗೆ ನಾನು ಕಾಗದ ಬರೆದುಕೊಡಲು ಪ್ರತಿವಾದಿಯನ್ನು ಕೇಳಿದ್ದೆ ಆದರೆ ಖರೀದಿ ಪತ್ರವನ್ನೇ ಮಾಡಿಕೊಡುತ್ತೇನೆ ಎಂದು ಹೇಳಿದರು ಎಂದು ಹೇಳುತ್ತಾರೆ. ಪ್ರತಿವಾದಿ ನನ್ನ ಹೆಸರಿಗೆ ಯಾವುದೇ ಖರೀದಿ ವಚನ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ರೂ.1 ವರೆ ಲಕ್ಷ ಕೊಡುವಾಗ ನಾನು ಖರೀದಿ ಪತ್ರ ಮಾಡಿಕೊಡಲು ಪ್ರತಿವಾದಿಯನ್ನು ಕೇಳಿದ್ದೇನೆ ಆದರೆ ಬಾಕಿ ಉಳಿದ 1 ಲಕ್ಷ 35 ಸಾವಿರ ಹಾಗೂ ಖರೀದಿ ಖರ್ಚು 15 ಸಾವಿರ ನನಗೆ ಕೊಡು ನಾನೇ ಖರೀದಿಪತ್ರದ ಖರ್ಚು ತುಂಬುತ್ತೇನೆ ಎಂದು ಪ್ರತಿವಾದಿಯರು ಹೇಳಿದರು. ಹಣ ನೀಡಿದ ಕೂಡಲೇ ಪ್ರತಿವಾದಿಗೆ ಖರೀದಿಪತ್ರ ಮಾಡಿಕೊಡುವಂತೆ ನೋಟೀಸ ನೀಡಿಲ್ಲ ಆದರೆ ಅವರು ಖರೀದಿಪತ್ರ ಮಾಡಿಕೊಡುವುದನ್ನು ಮುಂದೂಡುತ್ತಾ ಬಂದಿದ್ದು, ಹಿರಿಯರು ಸಹ ಖರೀದಿ ಪತ್ರ ಮಾಡಿಸಿ ಕೊಡುತ್ತೇವೆ ಎಂದು ಹೇಳಿದ್ದರು, ಆದರೂ ಸಹ ಖರೀದಿಪತ್ರ ಮಾಡಿಕೊಡದೇ ಇದ್ದಾಗ ನೋಟೀಸ ಕೊಡಿಸಿದ್ದೇನೆ. ಹಿರಿಯರು ಖರೀದಿ ಹಾಕಿಸಿಕೊಡುತ್ತೇವೆ ಎಂದು ಹೇಳಿದ್ದರು ಎಂದು ನನ್ನ ವಾದ ಪತ್ರದಲ್ಲಿ ಬರೆಯಿಸಿಲ್ಲ.

ಪ್ರತಿವಾದಿ ಖರೀದಿ ಮುಂದುಡುತ್ತಾ ಬಂದಿದ್ದರು ಮತ್ತು ಹಿರಿಯರು ಖರೀದಿ ಹಾಕಿಸಿಕೊಡುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯನ್ನು ಖರೀದಿ ಹಾಕಿಕೊಡಲು ವಿನಂತಿಸಿದ ನಿರ್ದಿಷ್ಟ ದಿನಾಂಕಗಳನ್ನು ಹೇಳಲಾಗುವುದಿಲ್ಲ. ವಚನ ಪತ್ರ ಆದ ದಿನಾಂಕದಿಂದ ನೋಟೀಸ ಕೊಡುವವರೆಗೆ ಖರೀದಿಹಾಕಿಸಿಕೊಳ್ಳಲು ಏನೇನು ಪ್ರಯತ್ನ ಮಾಡಿದ್ದೇನೆ ಎಂದು ವಿವರಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯನ್ನು ಖರೀದಿಗಾಗಿ ಕೇಳಲು ಹೋದಾಗ ನನ್ನೊಂದಿಗೆ ಸುರೇಶ ಕವಲೂರು ಹಾಗೂ ಚಂದ್ರಶೇಖರ ಚಬ್ಬರಬಾವಿ ಬಂದಿದ್ದರು.

**(ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಿದೆ)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.